# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

**ಮಲ್ಲೇಶ್ವರಂ, ಬೆಂಗಳೂರು – 3**

## 2019–20 ನೇ ಸಾಲಿನ ಪಠ್ಯಾಧಾರಿತ

## ಎಸ್.ಎಸ್.ಎಲ್.ಸಿ. ಪರೀಕ್ಷೆ

# ಶಾಲಾ ಅಭ್ಯರ್ಥಿಗಳಿಗೆ

# ಪ್ರಶ್ನೆ ಪತ್ರಿಕೆಯ  ಪರಿಷ್ಕೃತ ವಿನ್ಯಾಸ,

# ವಿಷಯ : ದ್ವಿತೀಯ ಭಾಷೆ ಕನ್ನಡ

**ಪರಿಷ್ಕೃತ ಪಠ್ಯ ಪುಸ್ತಕಕ್ಕೆ ಅನುಗುಣವಾಗಿ ಮೌಲ್ಯಮಾಪನವನ್ನು ಗುಣಾತ್ಮಕಗೊಳಿಸುವ ದೃಷ್ಟಿಯಿಂದ ಪ್ರಶ್ನೆ ಪತ್ರಿಕೆಯ ವಿನ್ಯಾಸದಲ್ಲಿ ಬದಲಾವಣೆಗಳನ್ನು ಮಾಡಲಾಗಿದೆ.**

## ಪ್ರಮುಖಾಂಶಗಳು

ದ್ವಿತೀಯ ಭಾಷೆ ಕನ್ನಡದಲ್ಲಿ ಇತರೇ ಎಲ್ಲಾ ವಿಷಯಗಳಂತೆ ಪ್ರಶ್ನೆ ಪತ್ರಿಕೆಯ ವಿನ್ಯಾಸವನ್ನು 2019-20 ನೇ ಸಾಲಿಗೆ ಪರಿಷ್ಕರಿಸಲಾಗಿದೆ. ಬಾಯಿಪಾಠ ಮಾಡಿ ಉತ್ತರಿಸುವ ಕಂಠಪಾಠ ವಿಧಾನವನ್ನು ಕಡೆಗಣಿಸುವ ದೃಷ್ಟಿಯಿಂದ ಸ್ಮರಣೆಯ [ಜ್ಞಾನಾತ್ಮಕ ಉದ್ದಿಷ್ಟದ] ಶೇಕಡಾವಾರು ಅಂಕಗಳ ಪ್ರಮಾಣವನ್ನು ಹಿಂದಿನ ವರ್ಷಗಳಿಗಿಂತ ಕಡಿಮೆ ಮಾಡಲಾಗಿದೆ. ಪರೀಕ್ಷಾ ಸಮಯದಲ್ಲಿ ನಕಲು ಮಾಡುವ ಅವಕಾಶಗಳನ್ನು ತಡೆಗಟ್ಟುವ ಉದ್ದೇಶದಿಂದ ವಸ್ತುನಿಷ್ಠ ಮಾದರಿಯ ಪ್ರಶ್ನೆಗಳ ಪ್ರಮಾಣವನ್ನೂ ಕಡಿಮೆಗೊಳಿಸಿದೆ. ಅತಿಕಿರು ಉತ್ತರಗಳ ಪ್ರಶ್ನೆಗಳ ಪ್ರಮಾಣವನ್ನು ಶೇ.40 ಕ್ಕಿಂತ ಕಡಿಮೆಗೆ ನಿಗದಿಗೊಳಿಸಿ ಪರೀಕ್ಷಾ ಸಮಯದಲ್ಲಿ ಅವ್ಯವಹಾರಗಳಿಗೆ ಇರುವ ಅವಕಾಶಗಳನ್ನು ತಪ್ಪಿಸಲು ಕ್ರಮಕೈಗೊಂಡಿದೆ. ಅಲ್ಲದೇ ಭಾಷಾ ಸಾಮರ್ಥ್ಯವನ್ನು ಅಳೆಯಲು ಸಾಧ್ಯವಾಗುವಂತೆ ಬರೆವಣಿಗೆಗೆ ಒತ್ತು ನೀಡಿ ವಿವರಣಾತ್ಮಕ ಉತ್ತರಗಳ ಪ್ರಶ್ನಾ ಸಂಖ್ಯೆಗಳನ್ನು ಹೆಚ್ಚಿಸಲಾಗಿದೆ. ವಿದ್ಯಾರ್ಥಿಗಳು, ಪೋಷಕರಾದಿಯಾಗಿ ಶಿಕ್ಷಕರು ಅಂಕಗಳ ಬೆನ್ನುಹತ್ತಿ ಕೇವಲ ಪರೀಕ್ಷಾ ದೃಷ್ಟಿಯಿಂದ ಪಾಠ ಬೋಧನೆ ಮಾಡುತ್ತಿರುವುದು ಗಮನಕ್ಕೆ ಬಂದಿದ್ದು, ಘಟಕವಾರು ನಿಗದಿಗೊಳಿಸಿದ ಅಂಕಗಳನ್ನು ಆಧರಿಸಿ ಕಲಿಕೆಯಲ್ಲಿ ತೊಡಗುವುದನ್ನು ತಪ್ಪಿಸುವ ದೃಷ್ಟಿಯಿಂದ ಘಟಕವಾರು ಅಂಕ ಹಂಚಿಕೆಯನ್ನು ಕೈಬಿಟ್ಟು ಗದ್ಯ, ಪದ್ಯ, ಪೂರಕ ಅಧ್ಯಯನ ಹಾಗೂ ವ್ಯಾಕರಣ ಎಂಬ ವಿಭಾಗವಾರು ಅಂದರೆ ಥೀಮ್ ಬೇಸ್ಡ್ [THEME BASED] ಮಾದರಿಯ ಅಂಕ ಹಂಚಿಕೆಯನ್ನು ಕೊಡಲಾಗಿದೆ. ಈ ಹಿಂದಿನ ವರ್ಷಗಳಲ್ಲಿದ್ದ ಎ, ಬಿ ಮತ್ತು ಸಿ ಎಂಬ ವಿಭಾಗಗಳ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಿ ಅಂಕಗಳನ್ನು ಆಧರಿಸಿ ಏರಿಕೆ ಕ್ರಮದಲ್ಲಿ ಪ್ರಶ್ನೆಗಳ ಜೋಡನೆಯನ್ನು ಮಾಡಿ ಪ್ರಶ್ನೆ ಪತ್ರಿಕೆಯ ವಿನ್ಯಾಸದಲ್ಲಿ ಏಕರೂಪತೆಯನ್ನು ತಂದು ಇತರೇ ವಿಷಯಗಳಂತೆ ಕನ್ನಡದಲ್ಲೂ ಸಹ ಬದಲಾವಣೆ ಮಾಡಲಾಗಿದೆ.

- ಗುಣಾತ್ಮಕ ಕಲಿಕೆ ಇಂದಿನ ಅಗತ್ಯವಾಗಿದೆ.
- ಪಠ್ಯಪುಸ್ತಕದ ಆಶಯಗಳು ಈಡೇರಬೇಕಾಗಿದೆ.
- ಹತ್ತನೆಯ ತರಗತಿಯ ಅಂತ್ಯದಲ್ಲಿ ನಡೆಸುವ ಪಬ್ಲಿಕ ಪರೀಕ್ಷೆ ಜೀವನದ ದಿಕ್ಸೂಚಿ
- ಪರೀಕ್ಷೆಯೂ ಗುಣಾತ್ಮಕವಾಗಿ ಆಗಬೇಕಾಗಿದೆ.
- 2019-20 ನೇ ಸಾಲಿನಿಂದ ಪರೀಕ್ಷಾ ಪ್ರಶ್ನೆ ಪತ್ರಿಕೆಯ ವಿನ್ಯಾಸವನ್ನು ಪರಿಷ್ಕರಿಸಿದೆ.
- ಪರೀಕ್ಷಾ ಪ್ರಶ್ನೆಗಳು ಕಲಿಕಾ ಪ್ರಶ್ನೆಗಳೇ ಆಗಿರದೇ ಕಲಿಕೆಯ ಫಲವನ್ನು ಅಳೆಯುವಂತೆ ಇರುತ್ತವೆ.
- ಉದ್ದಿಷ್ಟವಾರು ರಚನೆಯಾಗುವ ಪ್ರಶ್ನೆಗಳು, ಪಠ್ಯಪುಸ್ತಕದ ಅಭ್ಯಾಸ ಭಾಗದ ಪ್ರಶ್ನೆಗಳೇ ಅಲ್ಲದೆ ಉದ್ದಿಷ್ಟಕ್ಕನುಸಾರ ರಚಿಸಲಾದ ಹೊಸ ಪ್ರಶ್ನೆಗಳೂ ಆಗಿರುತ್ತವೆ.
- ಪಠ್ಯಪುಸ್ತಕದ ಪಠ್ಯಾಂಶವನ್ನು ಆಧರಿಸಿ ಪ್ರಶ್ನೆಗಳು ರಚನೆಯಾಗುವುದರಿಂದ ಪಠ್ಯಪುಸ್ತಕವನ್ನು ಅಭ್ಯಾಸ ಮಾಡಲೇಬೇಕು.
- ಥೀಮ್ ಬೇಸ್ಡ್ (ವಿಭಾಗವಾರು) ಅಂಕ ಹಂಚಿಕೆ ಇರುವುದರಿಂದ ಎಲ್ಲಾ ಘಟಕಗಳ ಅವಲೋಕನ ಅತ್ಯವಶ್ಯ

- ಸ್ಮರಣ / ಜ್ಞಾನಾತ್ಮಕ ಪ್ರಶ್ನೆಗಳಿಗಿಂತ ಅರ್ಥೈಸಿಕೊಂಡು ಉತ್ತರಿಸುವ ಹಾಗೂ ವಿವರವಾಗಿ ಬರೆವಣಿಗೆಯನ್ನು ನಿರೀಕ್ಷಿಸುವ ಪ್ರಶ್ನೆಗಳಿಗೆ ಪ್ರಾಶಸ್ತ್ಯ ನೀಡಿದೆ.
- ವಿದ್ಯಾರ್ಥಿಗಳಿಗೆ ಸ್ವತಃ ಉತ್ತರ ಬರೆಯುವ ಭಾಷಾ ಸಾಮರ್ಥ್ಯವನ್ನು ರೂಢಿಸುವ ಅಗತ್ಯವಿದೆ.
- ಪ್ರಶ್ನೆ ಪತ್ರಿಕೆಯಲ್ಲಿ ಆಯ್ಕೆ (Choice) ಪ್ರಶ್ನೆಗಳ ಪ್ರಮಾಣವನ್ನು ಶೇಕಡಾ 25 ಕ್ಕೆ ಮಿತಿಗೊಳಿಸಿದೆ.
- ಆಯ್ಕೆ (Choice) ಪ್ರಶ್ನೆಗಳಲ್ಲಿ ಮೂರು ಅಂಕಗಳ ಗಾದೆ, ನಾಲ್ಕು ಅಂಕಗಳ ಪದ್ಯ ಪೂರ್ಣಗೊಳಿಸುವುದು, ಗದ್ಯ – ಪದ್ಯ ಭಾಗದ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು ಮತ್ತು ಐದು ಅಂಕಗಳ ಪತ್ರ ಲೇಖನ ಹಾಗೂ ಪ್ರಬಂಧ ಬರೆವಣಿಗೆಯ ಪ್ರಶ್ನೆಗಳು ಅಂದರೆ ಒಟ್ಟಾರೆ ಇಪ್ಪತ್ತು ಅಂಕಗಳು ಇರುತ್ತವೆ.

## ಪ್ರಶ್ನೆ ಪತ್ರಿಕೆಯ ವಿನ್ಯಾಸದಲ್ಲಾದ ಬದಲಾವಣೆಗಳು

## ವಿಷಯ : ದ್ವಿತೀಯ ಭಾಷೆ ಕನ್ನಡ

**ಗರಿಷ್ಠ ಅಂಕಗಳು : 80** **ಅವಧಿ : 2–30 ಗಂಟೆಗಳು**

### 1. ಉದ್ದಿಷ್ಟಾನುಸಾರ ಪ್ರಾಮುಖ್ಯತೆ : ಶಾಲಾ ಅಭ್ಯರ್ಥಿಗಳಿಗೆ

| 2018–19 | | | 2019–20 | | |
|---|---|---|---|---|---|
| ಉದ್ದಿಷ್ಟಗಳು | ಪ್ರತಿಶತ | ದತ್ತ ಅಂಕಗಳು | ಉದ್ದಿಷ್ಟಗಳು | ಪ್ರತಿಶತ | ದತ್ತ ಅಂಕಗಳು |
| ಸ್ಮರಣೆ | 20 | 16 | ಸ್ಮರಣೆ | 10 | 8 |
| ಗ್ರಹಿಕೆ | 40 | 32 | ಗ್ರಹಿಕೆ | 40 | 32 |
| ಅಭಿವ್ಯಕ್ತಿ | 35 | 28 | ಅಭಿವ್ಯಕ್ತಿ | 45 | 36 |
| ಪ್ರಶಂಸೆ | 5 | 4 | ಪ್ರಶಂಸೆ | 5 | 4 |
| ಒಟ್ಟು | 100 | 80 | ಒಟ್ಟು | 100 | 80 |

ಸ್ಮರಣೆಯ ಪ್ರಶ್ನೋತ್ತರಗಳನ್ನು 16 ಅಂಕಗಳಿಂದ 8 ಕ್ಕೆ ಇಳಿಕೆ ಮಾಡಲಾಗಿದೆ. ಗ್ರಹಿಕೆಯ ಉತ್ತರಗಳ ಅಂಕಗಳನ್ನು 32 ಅಂಕಗಳನ್ನು ಯಥಾಸ್ಥಿತಿ ಇರಿಸಲಾಗಿದೆ. ದೀರ್ಘ ಉತ್ತರಗಳನ್ನು ನಿರೀಕ್ಷಿಸುವ ಅಭಿವ್ಯಕ್ತಿಯ ಉತ್ತರಗಳನ್ನು 28 ಅಂಕಗಳಿಂದ 36 ಅಂಕಗಳಿಗೆ ಹೆಚ್ಚಿಸಲಾಗಿದೆ. ಪ್ರಶಂಸೆಯ ಉತ್ತರದ ಶೇಕಡಾ ಪ್ರಮಾಣವನ್ನು ಯಥಾ ಪ್ರಕಾರ 4 ಅಂಕಗಳಿಗೆ ಉಳಿಸಿಕೊಂಡಿದೆ.

[ಪ್ರಶ್ನೆ ಪತ್ರಿಕೆಯಲ್ಲಿ ಪ್ರಶ್ನೆಗಳು ಉದ್ದಿಷ್ಟಾಧಾರಿತವಾಗಿರಲಿದ್ದು, ಪಠ್ಯ ಪುಸ್ತಕದ ಅಭ್ಯಾಸ ಭಾಗದಲ್ಲಿರುವ ಕಲಿಕಾ ಪ್ರಶ್ನೆಗಳೇ ಯಥಾ ಸ್ಥಿತಿಯಲ್ಲಿ ಮೌಲ್ಯಮಾಪನದ ಪ್ರಶ್ನೆಗಳಾಗಿ ಇರುತ್ತವೆ ಎನ್ನಲಾಗದು.]

## 2.ವಿಷಯಾನುಸಾರ ಪ್ರಾಮುಖ್ಯತೆ : ಶಾಲಾ ಅಭ್ಯರ್ಥಿಗಳಿಗೆ

| 2018-19 | | | | 2019-20 | | | |
|---|---|---|---|---|---|---|---|
| ವಿಷಯ/ ಉಪಘಟಕ | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳು | ವಿಷಯ/ ಉಪಘಟಕ | ಪ್ರತಿಶತ | ದತ್ತ ಅಂಕ ಗಳು | ಪ್ರಶ್ನೆಗಳು |
| ಗದ್ಯ | 31 | 25 | 13 | ಗದ್ಯ | 33 | 26 | 14 |
| ಪದ್ಯ | 30 | 24 | 11 | ಪದ್ಯ | 34 | 27 | 13 |
| ಪಠ್ಯ ಪೂರಕ ಅಧ್ಯಯನ | 05 | 04 | 02 | ಪಠ್ಯ ಪೂರಕ ಅಧ್ಯಯನ | 05 | 04 | 02 |
| ಅಪಠಿತ ಗದ್ಯ | 05 | 04 | 04 | ಅಪಠಿತ ಗದ್ಯ | 05 | 04 | 01 |
| ವ್ಯಾಕರಣಾಂಶಗಳು ಛಂದಸ್ಸು, ಅಲಂಕಾರ ಮತ್ತು ವಾಕ್ಯ ರಚನೆ | 29 | 23 | 15 | ವ್ಯಾಕರಣಾಂಶಗಳು ಛಂದಸ್ಸು, ಅಲಂಕಾರ ಮತ್ತು ವಾಕ್ಯ ರಚನೆ | 23 | 19 | 08 |
| ಒಟ್ಟು | 100 | 80 | 45 | ಒಟ್ಟು | 100 | 80 | 38 |

ಗದ್ಯ ಭಾಗದಲ್ಲಿ 25 ಅಂಕಗಳಿಂದ 26 ಅಂಕಗಳಿಗೆ, ಪದ್ಯ ಭಾಗದಲ್ಲಿ 24 ಅಂಕಗಳಿಂದ 27 ಅಂಕಗಳಿಗೆ ಹೆಚ್ಚಿಗೆ ಮಾಡಿದೆ ಹಾಗೂ ವ್ಯಾಕರಣ-ವಾಕ್ಯರಚನೆಯ ಭಾಗದಲ್ಲಿ 23 ಅಂಕಗಳಿಂದ 19 ಅಂಕಗಳಿಗೆ ಇಳಿಕೆ ಮಾಡಲಾಗಿದ್ದು, ಉಳಿದ ವಿಭಾಗಗಳು ಯಥಾ ಸ್ಥಿತಿ ಮುಂದುವರೆಯುತ್ತವೆ. ಪತ್ರಿಕೆಯ ಒಟ್ಟಾರೆ ಪ್ರಶ್ನೆಗಳ ಸಂಖ್ಯೆ 45 ರಿಂದ 38 ಕ್ಕೆ ಇಳಿಕೆಯಾಗಿದೆ. ಪ್ರಮುಖ ಗಮನೀಯ ಅಂಶವೆಂದರೆ ಅಪಠಿತ ಗದ್ಯದಲ್ಲಿ ಒಂದು ಅಂಕದ ನಾಲ್ಕು ಪ್ರಶ್ನೆಗಳಿದ್ದವು ಅದನ್ನು ಈಗ ಎರಡು ಅಂಕಗಳ ಎರಡು ಪ್ರಶ್ನೆಗಳನ್ನಾಗಿ ಬದಲಾಯಿಸಿ ನೀಲನಕಾಶೆಯಲ್ಲಿ ನಾಲ್ಕು ಅಂಕಗಳ ಒಂದೇ ಪ್ರಶ್ನೆಯೆಂದು ತೋರಿಸಲಾಗುವುದು. ಪರೀಕ್ಷಾ ತಯಾರಿಗೆ ಎಲ್ಲಾ ಘಟಕಗಳ ಎಲ್ಲಾ ಅಂಶಗಳನ್ನು ಅಭ್ಯಾಸ ಮಾಡಿಕೊಳ್ಳುವ ಅಗತ್ಯವಿದೆ. ವ್ಯಾಕರಣ, ಛಂದಸ್ಸು, ಅಲಂಕಾರ ಮತ್ತು ವಾಕ್ಯರಚನೆಗೆ ಒಟ್ಟಾರೆ 19 ಅಂಕಗಳನ್ನು ಮೀಸಲಿಟ್ಟಿದೆ. ಪಠ್ಯ ಪುಸ್ತಕದಲ್ಲಿ ಇರುವ ವ್ಯಾಕರಣಾಂಶಗಳಲ್ಲಿ ಈ ಕೆಳಕಾಣುವ ಅಂಶಗಳನ್ನು ಆಧರಿಸಿ ವಸ್ತುನಿಷ್ಠ ಪ್ರಶ್ನೆಗಳನ್ನು ತಯಾರಿಸಲಾಗುವುದು.

| ಕ್ರ. ಸಂ. | ವ್ಯಾಕರಣಾಂಶಗಳು |
|---|---|
| 1 | ವರ್ಣಮಾಲೆ |
| 2 | ನಾಮಪದ, ನಾಮಪದದ ವಿಧಗಳು |
| 3 | ಕಾಲಗಳು – ವಿಭಕ್ತಿ ಪ್ರತ್ಯಯಗಳು |
| 4 | ಕ್ರಿಯಾಪದಗಳು |
| 5 | ಸಂಧಿಗಳು ( ಕನ್ನಡ ಮತ್ತು ಸಂಸ್ಕೃತ ) |
| 6 | ಸಮಾಸಗಳು |
| 7 | ತತ್ಸಮ– ತದ್ಭವಗಳು |
| 8 | ಗ್ರಾಂಥಿಕರೂಪಗಳು |
| 9 | ದ್ವಿರುಕ್ತಿ–ಜೋಡುನುಡಿ–ನುಡಿಗಟ್ಟು |

| | |
|---|---|
| 10 | ಅವ್ಯಯಗಳು |
| 11 | ಲೇಖನ ಚಿಹ್ನೆಗಳು |
| 12 | ಪದಗಳ ಅರ್ಥ |
| 13 | ಹೊಸಗನ್ನಡ ರೂಪ |
| 14 | ಛಂದಸ್ಸು |
| 15 | ಅಲಂಕಾರ |

## 3. ಪ್ರಶ್ನಾನುಸಾರ ಪ್ರಾಮುಖ್ಯತೆ : ಶಾಲಾ ಅಭ್ಯರ್ಥಿಗಳಿಗೆ

| 2018–19 | | | | | 2019–20 | | | | |
|---|---|---|---|---|---|---|---|---|---|
| ಪ್ರಶ್ನೆಗಳ ವಿಧಗಳು | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ | ಅಪೇಕ್ಷಿತ ಸಮಯ | ಪ್ರಶ್ನೆಗಳ ವಿಧಗಳು | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ | ಅಪೇಕ್ಷಿತ ಸಮಯ |
| ವಸ್ತುನಿಷ್ಠ | 15 | 12 | 12 | 18 ನಿ. | ವಸ್ತುನಿಷ್ಠ | 5 | 04 | 04 | 04 ನಿಮಿಷಗಳು |
| ಅತಿ ಕಿರು ಉತ್ತರಗಳು (1)ಒಂದು ಅಂಕದ ಪ್ರಶ್ನೆಗಳು | 15 | 12 | 12 | 18 ನಿ. | ಅತಿ ಕಿರು ಉತ್ತರಗಳು (1)ಒಂದು ಅಂಕದ ಪ್ರಶ್ನೆಗಳು | 15 | 12 | 12 | 12 ನಿ. |
| ಕಿರು ಉತ್ತರಗಳು (2)ಎರಡು ಅಂಕಗಳ ಪ್ರಶ್ನೆಗಳು | 27 | 22 | 11 | 30 ನಿ. | ಕಿರು ಉತ್ತರಗಳು (2)ಎರಡು ಅಂಕಗಳ ಪ್ರಶ್ನೆಗಳು | 20 | 16 | 08 | 28 ನಿ. |
| ದೀರ್ಘ ಉತ್ತರಗಳು (1)ಮೂರು ಅಂಕಗಳ ಪ್ರಶ್ನೆಗಳು | 23 | 18 | 6 | 49 ನಿ | ದೀರ್ಘ ಉತ್ತರಗಳು (1)ಮೂರು ಅಂಕಗಳ ಪ್ರಶ್ನೆಗಳು | 34 | 27 | 09 | 45 ನಿ. |
| ದೀರ್ಘ ಉತ್ತರಗಳು(2 ನಾಲ್ಕು ಅಂಕಗಳ ಪ್ರಶ್ನೆಗಳು | 20 | 16 | 4 | 20 ನಿ. | ದೀರ್ಘ ಉತ್ತರಗಳು(2 ನಾಲ್ಕು ಅಂಕಗಳ ಪ್ರಶ್ನೆಗಳು | 20 | 16 | 04 | 36 ನಿ. |
| ದೀರ್ಘ ಉತ್ತರಗಳು(3) ಐದು ಅಂಕಗಳ ಪ್ರಶ್ನೆಗಳು | – | – | – | – | ದೀರ್ಘ ಉತ್ತರಗಳು(3) ಐದು ಅಂಕಗಳ ಪ್ರಶ್ನೆಗಳು | 6 | 5 | 01 | 10 ನಿ. |
| ಒಟ್ಟು | 100 | 80 | 45 | 135+15 ನಿಮಿಷ | ಒಟ್ಟು | 100 | 80 | 38 | 135+15 ನಿಮಿಷಗಳು |

ನೀಲ ನಕಾಶೆಯಲ್ಲಿ ಪ್ರಶ್ನೆಗಳ ವಿಧಗಳನ್ನು ಈ ಮೇಲಿನಂತೆ ವಸ್ತುನಿಷ್ಠ, ಅತಿಕಿರು ಉತ್ತರ 1, ಕಿರು ಉತ್ತರ 2 ಮತ್ತು ದೀರ್ಘ ಉತ್ತರ 1, 2, 3 ಎಂದು ಆರು ವಿಧಗಳಲ್ಲಿ ತೋರಿಸುವ ರೂಢಿಯಿದ್ದು, ವಸ್ತುನಿಷ್ಠ ಪ್ರಶ್ನೆಗಳು ಬಹುಆಯ್ಕೆಯ ಒಂದು ಪದದ ಉತ್ತರಗಳದ್ದಾಗಿದ್ದು, ಅ.ಕಿ.ಉ.1 : ಒಂದು ವಾಕ್ಯದ ಉತ್ತರ, ಕಿ.ಉ.2: ಎರಡು–ಮೂರು ವಾಕ್ಯಗಳ ಉತ್ತರ, ದೀ.ಉ.1: 3 ಅಂಕಗಳ ಪ್ರಶ್ನೆಗಳು, ದೀ.ಉ.2: ನಾಲ್ಕು ಅಂಕಗಳ ಪ್ರಶ್ನೆ ಮತ್ತು ದೀ.ಉ.3: ಐದು ಅಂಕಗಳ ಪ್ರಶ್ನೆಗಳದ್ದಾಗಿವೆ. ಪ್ರಶ್ನಾ ವಿಧಗಳಲ್ಲಾದ ಬದಲಾವಣೆ ಈ ಮೇಲಿನ ಕೋಷ್ಟಕದಲ್ಲಿ ಕಾಣಸಿಗುತ್ತದೆ. ವಿದ್ಯಾರ್ಥಿಗಳಿಗೆ ಉತ್ತರ ಬರೆಯಲು 2 ಗಂಟೆ 15 ನಿಮಿಷಗಳ ಕಾಲಾವಕಾಶವಿದ್ದು, ಪ್ರಾರಂಭದಲ್ಲಿ ಪ್ರಶ್ನೆ ಪತ್ರಿಕೆ ಓದಿಕೊಳ್ಳಲು 15 ನಿಮಿಷಗಳ ಸಮಯವನ್ನು ಮೀಸಲಿಟ್ಟದೆ.

4. ಕಠಿಣತೆಯ ಮಟ್ಟ : ಶಾಲಾ ಅಭ್ಯರ್ಥಿಗಳಿಗೆ

| 2018–19 | | | | 2019–20 | | | |
|---|---|---|---|---|---|---|---|
| ಸುಲಭ | ಸಾಧಾರಣ | ಕಠಿಣ | ಒಟ್ಟು | ಸುಲಭ | ಸಾಧಾರಣ | ಕಠಿಣ | ಒಟ್ಟು |
| 30% | 50% | 20% | 100% | 30% | 50% | 20% | 100% |

ಕಠಿಣತೆಯ ಮಟ್ಟದಲ್ಲಿ ಯಾವುದೇ ಬದಲಾವಣೆಯಿಲ್ಲದೆ ಕಳೆದ ವರ್ಷದ ಪ್ರಮಾಣ ಯಥಾ ಸ್ಥಿತಿ ಮುಂದುವರೆದಿದೆ.

5. ಪ್ರಶ್ನೆಗಳ ಸ್ವರೂಪ ಮತ್ತು ಅಂಕ ವಿತರಣೆ : ಶಾಲಾ ಅಭ್ಯರ್ಥಿಗಳಿಗೆ

| 2018–19 | | | 2019–20 | | |
|---|---|---|---|---|---|
| ಬಹು ಆಯ್ಕೆ ಪ್ರಶ್ನೆಗಳು | 1 ಅಂಕದ 12 ಪ್ರಶ್ನೆಗಳು | 12*1=12 | ಬಹು ಆಯ್ಕೆ ಪ್ರಶ್ನೆಗಳು | 1 ಅಂಕದ 4 ಪ್ರಶ್ನೆಗಳು | 1*04=04 |
| ಒಂದು ವಾಕ್ಯದಲ್ಲಿ ಉತ್ತರಿಸುವುದು | 1 ಅಂಕದ 12 ಪ್ರಶ್ನೆಗಳು | 12*1=12 | ಒಂದು ವಾಕ್ಯದಲ್ಲಿ ಉತ್ತರಿಸುವುದು | 1 ಅಂಕದ 12 ಪ್ರಶ್ನೆಗಳು | 1*12=12 |
| 3–4 ವಾಕ್ಯಗಳಲ್ಲಿ ಉತ್ತರಿಸುವುದು | 2 ಅಂಕಗಳ 11 ಪ್ರಶ್ನೆಗಳು | 11*2=22 | 3–4 ವಾಕ್ಯಗಳಲ್ಲಿ ಉತ್ತರಿಸುವುದು | 2 ಅಂಕಗಳ 8 ಪ್ರಶ್ನೆಗಳು | 2*8=16 |
| 5–6 ವಾಕ್ಯಗಳಲ್ಲಿ ಉತ್ತರಿಸುವುದು | 3 ಅಂಕಗಳ 6 ಪ್ರಶ್ನೆಗಳು | 6*3= 18 | 5–6 ವಾಕ್ಯಗಳಲ್ಲಿ ಉತ್ತರಿಸುವುದು | 3 ಅಂಕಗಳ 9 ಪ್ರಶ್ನೆಗಳು | 3*9=27 |
| 8–10 ವಾಕ್ಯಗಳಲ್ಲಿ ಉತ್ತರಿಸುವುದು | 4 ಅಂಕಗಳ 2 ಪ್ರಶ್ನೆಗಳು | 2*4=08 | 8–10 ವಾಕ್ಯಗಳಲ್ಲಿ ಉತ್ತರಿಸುವುದು ಮತ್ತು ಪ್ರಬಂಧ ಬರೆಹ | 4 ಅಂಕಗಳ 4 ಪ್ರಶ್ನೆಗಳು | 4*4=16 |
| ಪತ್ರ & ಪ್ರಬಂಧ– ವಿಸ್ತಾರವಾಗಿ ಉತ್ತರಿಸುವುದು | 4 ಅಂಕಗಳ 2 ಪ್ರಶ್ನೆಗಳು | 2 * 4 = 08 | ಪತ್ರ ವಿಸ್ತಾರವಾಗಿ ಉತ್ತರಿಸುವುದು | 5 ಅಂಕಗಳ 1 ಪ್ರಶ್ನೆಗಳು | 5*1=05 |
| ಒಟ್ಟು | 45 ಪ್ರಶ್ನೆಗಳು | 80 ಅಂಕಗಳು | ಒಟ್ಟು | 38 ಪ್ರಶ್ನೆಗಳು | 80 ಅಂಕಗಳು |

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

**ಮಲ್ಲೇಶ್ವರಂ, ಬೆಂಗಳೂರು – 3**

## 2019–20 ನೇ ಸಾಲಿನ ಪಠ್ಯಾಧಾರಿತ

## ಎಸ್.ಎಸ್.ಎಲ್.ಸಿ. ಪರೀಕ್ಷೆ

## ಖಾಸಗಿ ಅಭ್ಯರ್ಥಿಗಳಿಗಾಗಿ

## ಪ್ರಶ್ನೆ ಪತ್ರಿಕೆಯ ಪರಿಷ್ಕೃತ ವಿನ್ಯಾಸ,

## ವಿಷಯ : ದ್ವಿತೀಯ ಭಾಷೆ ಕನ್ನಡ

## ಪರಿಷ್ಕೃತ ಪಠ್ಯ ಪುಸ್ತಕಕ್ಕೆ ಅನುಗುಣವಾಗಿ ಮೌಲ್ಯಮಾಪನವನ್ನು ಗುಣಾತ್ಮಕಗೊಳಿಸುವ ದೃಷ್ಟಿಯಿಂದ ಪ್ರಶ್ನೆ ಪತ್ರಿಕೆಯ ವಿನ್ಯಾಸದಲ್ಲಿ ಬದಲಾವಣೆಗಳನ್ನು ಮಾಡಲಾಗಿದೆ.

### ಪ್ರಮುಖಾಂಶಗಳು

**ದ್ವಿತೀಯ ಭಾಷೆ ಕನ್ನಡದಲ್ಲಿ** ಇತರೇ ಎಲ್ಲಾ ವಿಷಯಗಳಂತೆ ಪ್ರಶ್ನೆ ಪತ್ರಿಕೆಯ ವಿನ್ಯಾಸವನ್ನು 2019-20 ನೇ ಸಾಲಿಗೆ ಪರಿಷ್ಕರಿಸಲಾಗಿದೆ. ಬಾಯಿಪಾಠ ಮಾಡಿ ಉತ್ತರಿಸುವ ಕಂಠಪಾಠ ವಿಧಾನವನ್ನು ಕಡೆಗಣಿಸುವ ದೃಷ್ಟಿಯಿಂದ ಸ್ಮರಣೆಯ [ಜ್ಞಾನಾತ್ಮಕ ಉದ್ದಿಷ್ಟದ] ಶೇಕಡಾವಾರು ಅಂಕಗಳ ಪ್ರಮಾಣವನ್ನು ಹಿಂದಿನ ವರ್ಷಗಳಿಗಿಂತ ಕಡಿಮೆ ಮಾಡಲಾಗಿದೆ. ಪರೀಕ್ಷಾ ಸಮಯದಲ್ಲಿ ನಕಲು ಮಾಡುವ ಅವಕಾಶಗಳನ್ನು ತಡೆಗಟ್ಟುವ ಉದ್ದೇಶದಿಂದ ವಸ್ತುನಿಷ್ಠ ಮಾದರಿಯ ಪ್ರಶ್ನೆಗಳ ಪ್ರಮಾಣವನ್ನೂ ಕಡಿಮೆಗೊಳಿಸಿದೆ. ಅತಿಕಿರು ಉತ್ತರಗಳ ಪ್ರಶ್ನೆಗಳ ಪ್ರಮಾಣವನ್ನು ಶೇ.40 ಕ್ಕಿಂತ ಕಡಿಮೆಗೆ ನಿಗದಿಗೊಳಿಸಿ ಪರೀಕ್ಷಾ ಸಮಯದಲ್ಲಿ ಅವ್ಯವಹಾರಗಳಿಗೆ ಇರುವ ಅವಕಾಶಗಳನ್ನು ತಪ್ಪಿಸಲು ಕ್ರಮಕೈಗೊಂಡಿದೆ. ಅಲ್ಲದೇ ಭಾಷಾ ಸಾಮರ್ಥ್ಯವನ್ನು ಅಳೆಯಲು ಸಾಧ್ಯವಾಗುವಂತೆ ಬರೆವಣಿಗೆಗೆ ಒತ್ತು ನೀಡಿ ವಿವರಣಾತ್ಮಕ ಉತ್ತರಗಳ ಪ್ರಶ್ನಾ ಸಂಖ್ಯೆಗಳನ್ನು ಹೆಚ್ಚಿಸಲಾಗಿದೆ. ವಿದ್ಯಾರ್ಥಿಗಳು, ಪೋಷಕರಾದಿಯಾಗಿ ಶಿಕ್ಷಕರು ಅಂಕಗಳ ಬೆನ್ನುಹತ್ತಿ ಕೇವಲ ಪರೀಕ್ಷಾ ದೃಷ್ಟಿಯಿಂದ ಪಾಠ ಬೋಧನೆ ಮಾಡುತ್ತಿರುವುದು ಗಮನಕ್ಕೆ ಬಂದಿದ್ದು, ಘಟಕವಾರು ನಿಗದಿಗೊಳಿಸಿದ ಅಂಕಗಳನ್ನು ಆಧರಿಸಿ ಕಲಿಕೆಯಲ್ಲಿ ತೊಡಗುವುದನ್ನು ತಪ್ಪಿಸುವ ದೃಷ್ಟಿಯಿಂದ ಘಟಕವಾರು ಅಂಕ ಹಂಚಿಕೆಯನ್ನು ಕೈಬಿಟ್ಟು ಗದ್ಯ, ಪದ್ಯ, ಪೂರಕ ಅಧ್ಯಯನ ಹಾಗೂ ವ್ಯಾಕರಣ ಎಂಬ ವಿಭಾಗವಾರು ಅಂದರೆ ಥೀಮ್ ಬೇಸ್ಡ್ [THEME BASED] ಮಾದರಿಯ ಅಂಕ ಹಂಚಿಕೆಯನ್ನು ಕೊಡಲಾಗಿದೆ. ಈ ಹಿಂದಿನ ವರ್ಷಗಳಲ್ಲಿದ್ದ ಎ, ಬಿ ಮತ್ತು ಸಿ ಎಂಬ ವಿಭಾಗಗಳ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಿ ಅಂಕಗಳನ್ನು ಆಧರಿಸಿ ಏರಿಕೆ ಕ್ರಮದಲ್ಲಿ ಪ್ರಶ್ನೆಗಳ ಜೋಡನೆಯನ್ನು ಮಾಡಿ ಪ್ರಶ್ನೆ ಪತ್ರಿಕೆಯ ವಿನ್ಯಾಸದಲ್ಲಿ ಏಕರೂಪತೆಯನ್ನು ತಂದು ಇತರೇ ವಿಷಯಗಳಂತೆ ಕನ್ನಡದಲ್ಲೂ ಸಹ ಬದಲಾವಣೆ ಮಾಡಲಾಗಿದೆ. ಹಾಗಾಗಿ ಈ ಅಂಶಗಳನ್ನು ಗಮನಿಸಿ

- ಗುಣಾತ್ಮಕ ಕಲಿಕೆ ಇಂದಿನ ಅಗತ್ಯವಾಗಿದೆ.
- ಪಠ್ಯಪುಸ್ತಕದ ಆಶಯಗಳು ಈಡೇರಬೇಕಾಗಿದೆ.
- ಹತ್ತನೆಯ ತರಗತಿಯ ಅಂತ್ಯದಲ್ಲಿ ನಡೆಸುವ ಪಬ್ಲಿಕ ಪರೀಕ್ಷೆ ಜೀವನದ ದಿಕ್ಸೂಚಿ
- ಪರೀಕ್ಷೆಯೂ ಗುಣಾತ್ಮಕವಾಗಿ ಆಗಬೇಕಾಗಿದೆ.
- 2019-20 ನೇ ಸಾಲಿನಿಂದ ಪರೀಕ್ಷಾ ಪ್ರಶ್ನೆ ಪತ್ರಿಕೆಯ ವಿನ್ಯಾಸವನ್ನು ಪರಿಷ್ಕರಿಸಿದೆ.
- ಪರೀಕ್ಷಾ ಪ್ರಶ್ನೆಗಳು ಕಲಿಕಾ ಪ್ರಶ್ನೆಗಳೇ ಆಗಿರದೇ ಕಲಿಕೆಯ ಫಲವನ್ನು ಅಳೆಯುವಂತೆ ಇರುತ್ತವೆ.
- ಉದ್ದಿಷ್ಟವಾರು ರಚನೆಯಾಗುವ ಪ್ರಶ್ನೆಗಳು, ಪಠ್ಯಪುಸ್ತಕದ ಅಭ್ಯಾಸ ಭಾಗದ ಪ್ರಶ್ನೆಗಳೇ ಅಲ್ಲದೆ ಉದ್ದಿಷ್ಟಕ್ಕನುಸಾರ ರಚಿಸಲಾದ ಹೊಸ ಪ್ರಶ್ನೆಗಳೂ ಆಗಿರುತ್ತವೆ.
- ಪಠ್ಯಪುಸ್ತಕದ ಪಠ್ಯಾಂಶವನ್ನು ಆಧರಿಸಿ ಪ್ರಶ್ನೆಗಳು ರಚನೆಯಾಗುವುದರಿಂದ ಪಠ್ಯಪುಸ್ತಕವನ್ನು ಅಭ್ಯಾಸ ಮಾಡಲೇಬೇಕು.

- ಥೀಮ್ ಬೇಸ್ಡ್ (ವಿಭಾಗವಾರು) ಅಂಕ ಹಂಚಿಕೆ ಇರುವುದರಿಂದ ಎಲ್ಲಾ ಘಟಕಗಳ ಅವಲೋಕನ ಅತ್ಯವಶ್ಯ
- ಸ್ಮರಣ / ಜ್ಞಾನಾತ್ಮಕ ಪ್ರಶ್ನೆಗಳಿಗಿಂತ ಅರ್ಥೈಸಿಕೊಂಡು ಉತ್ತರಿಸುವ ಹಾಗೂ ವಿವರವಾಗಿ ಬರೆವಣಿಗೆಯನ್ನು ನಿರೀಕ್ಷಿಸುವ ಪ್ರಶ್ನೆಗಳಿಗೆ ಪ್ರಾಶಸ್ತ್ಯ ನೀಡಿದೆ.
- ವಿದ್ಯಾರ್ಥಿಗಳಿಗೆ ಸ್ವತಃ ಉತ್ತರ ಬರೆಯುವ ಭಾಷಾ ಸಾಮರ್ಥ್ಯವನ್ನು ರೂಢಿಸುವ ಅಗತ್ಯವಿದೆ.
- ಪ್ರಶ್ನೆ ಪತ್ರಿಕೆಯಲ್ಲಿ ಆಯ್ಕೆ (Choice) ಪ್ರಶ್ನೆಗಳ ಪ್ರಮಾಣವನ್ನು ಶೇಕಡಾ 25 ಕ್ಕೆ ಮಿತಿಗೊಳಿಸಿದೆ.
- ಆಯ್ಕೆ (Choice) ಪ್ರಶ್ನೆಗಳಲ್ಲಿ ಮೂರು ಅಂಕಗಳ ಗಾದೆ, ನಾಲ್ಕು ಅಂಕಗಳ ಪದ್ಯ ಪೂರ್ಣಗೊಳಿಸುವುದು, ಗದ್ಯ – ಪದ್ಯ ಭಾಗದ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು ಮತ್ತು ಐದು ಅಂಕಗಳ ಪತ್ರ ಲೇಖನ ಹಾಗೂ ಪ್ರಬಂಧ ಬರೆವಣಿಗೆಯ ಪ್ರಶ್ನೆಗಳು ಇರುತ್ತವೆ.

## ಪ್ರಶ್ನೆ ಪತ್ರಿಕೆಯ ವಿನ್ಯಾಸದಲ್ಲಾದ ಬದಲಾವಣೆಗಳು

## ವಿಷಯ : ದ್ವಿತೀಯ ಭಾಷೆ ಕನ್ನಡ

**ಗರಿಷ್ಠ ಅಂಕಗಳು : 100** **ಅವಧಿ : 2–45 ಗಂಟೆಗಳು**

### 1. ಉದ್ದಿಷ್ಟಾನುಸಾರ ಪ್ರಾಮುಖ್ಯತೆ : ಖಾಸಗಿ ಅಭ್ಯರ್ಥಿಗಳಿಗಾಗಿ

| 2018–19 | | | 2019–20 | | |
|---|---|---|---|---|---|
| ಉದ್ದಿಷ್ಟಗಳು | ಪ್ರತಿಶತ | ದತ್ತ ಅಂಕಗಳು | ಉದ್ದಿಷ್ಟಗಳು | ಪ್ರತಿಶತ | ದತ್ತ ಅಂಕಗಳು |
| ಸ್ಮರಣೆ | 20 | 20 | ಸ್ಮರಣೆ | 11 | 11 |
| ಗ್ರಹಿಕೆ | 40 | 40 | ಗ್ರಹಿಕೆ | 43 | 43 |
| ಅಭಿವ್ಯಕ್ತಿ | 36 | 36 | ಅಭಿವ್ಯಕ್ತಿ | 42 | 42 |
| ಪ್ರಶಂಸೆ | 4 | 4 | ಪ್ರಶಂಸೆ | 04 | 04 |
| ಒಟ್ಟು | 100 | 100 | ಒಟ್ಟು | 100 | 100 |

ಸ್ಮರಣೆಯ ಪ್ರಶ್ನೋತ್ತರಗಳನ್ನು 20 ಅಂಕಗಳಿಂದ 11 ಅಂಕಗಳಿಗೆ ಇಳಿಕೆ ಮಾಡಲಾಗಿದೆ. ಗ್ರಹಿಕೆಯ ಉತ್ತರಗಳ ಅಂಕಗಳನ್ನು 40 ಅಂಕಗಳನ್ನು 43 ಅಂಕಗಳಿಗೆ ಹೆಚ್ಚಿಸಲಾಗಿದೆ. ದೀರ್ಘ ಉತ್ತರಗಳನ್ನು ನಿರೀಕ್ಷಿಸುವ ಅಭಿವ್ಯಕ್ತಿಯ ಉತ್ತರಗಳನ್ನು 36 ಅಂಕಗಳಿಂದ 42 ಅಂಕಗಳಿಗೆ ಹೆಚ್ಚಿಸಲಾಗಿದೆ. ಪ್ರಶಂಸೆಯ ಉತ್ತರದ ಶೇಕಡಾ ಪ್ರಮಾಣವನ್ನು ಯಥಾ ಪ್ರಕಾರ 4 ಅಂಕಗಳಿಗೆ ಉಳಿಸಿಕೊಂಡಿದೆ.

[ಪ್ರಶ್ನೆ ಪತ್ರಿಕೆಯಲ್ಲಿ ಪ್ರಶ್ನೆಗಳು ಉದ್ದಿಷ್ಟಾಧಾರಿತವಾಗಿರಲಿದ್ದು, ಪಠ್ಯ ಪುಸ್ತಕದ ಅಭ್ಯಾಸ ಭಾಗದಲ್ಲಿರುವ ಕಲಿಕಾ ಪ್ರಶ್ನೆಗಳೇ ಯಥಾ ಸ್ಥಿತಿಯಲ್ಲಿ ಮೌಲ್ಯಮಾಪನದ ಪ್ರಶ್ನೆಗಳಾಗಿ ಇರುತ್ತವೆ ಎನ್ನಲಾಗದು.]

## 2.ವಿಷಯಾನುಸಾರ ಪ್ರಾಮುಖ್ಯತೆ : ಖಾಸಗಿ ಅಭ್ಯರ್ಥಿಗಳಿಗಾಗಿ

| 2018–19 | | | | 2019–20 | | | |
|---|---|---|---|---|---|---|---|
| ವಿಷಯ/ ಉಪಘಟಕ | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳು | ವಿಷಯ/ ಉಪಘಟಕ | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳು |
| ಗದ್ಯ | 35 | 35 | 19 | ಗದ್ಯ | 34 | 34 | 18 |
| ಪದ್ಯ | 34 | 34 | 17 | ಪದ್ಯ | 35 | 35 | 17 |
| ಪಠ್ಯ ಪೂರಕ ಅಧ್ಯಯನ | 04 | 04 | 02 | ಪಠ್ಯ ಪೂರಕ ಅಧ್ಯಯನ | 04 | 04 | 02 |
| ಅಪಠಿತ ಗದ್ಯ | 04 | 04 | 04 | ಅಪಠಿತ ಗದ್ಯ | 04 | 04 | 01 |
| ವ್ಯಾಕರಣಾಂಶಗಳು ಛಂದಸ್ಸು, ಅಲಂಕಾರ ಮತ್ತು ವಾಕ್ಯ ರಚನೆ | 23 | 23 | 15 | ವ್ಯಾಕರಣಾಂಶ ಗಳು ಛಂದಸ್ಸು, ಅಲಂಕಾರ ಮತ್ತು ವಾಕ್ಯ ರಚನೆ | 23 | 23 | 10 |
| ಒಟ್ಟು | 100 | 100 | 57 | ಒಟ್ಟು | 100 | 100 | 48 |

ಗದ್ಯ ಭಾಗದಲ್ಲಿ 35 ಅಂಕಗಳಿಂದ 34 ಅಂಕಗಳಿಗೆ ಇಳಿಕೆ ಮಾಡಿದೆ. ಪದ್ಯ ಭಾಗದಲ್ಲಿ 34 ಅಂಕಗಳಿಂದ 35 ಅಂಕಗಳಿಗೆ ಹೆಚ್ಚಿಗೆ ಮಾಡಿದೆ. ಉಳಿದ ವಿಭಾಗಗಳು ಯಥಾ ಸ್ಥಿತಿ ಮುಂದುವರೆಯುತ್ತವೆ. ಪತ್ರಿಕೆಯ ಒಟ್ಟಾರೆ ಪ್ರಶ್ನೆಗಳ ಸಂಖ್ಯೆ 57 ರಿಂದ 48 ಅಂಕಗಳಿಗೆ ಇಳಿಕೆಯಾಗಿದೆ. ಪ್ರಮುಖ ಗಮನೀಯ ಅಂಶವೆಂದರೆ ಅಪಠಿತ ಗದ್ಯದಲ್ಲಿ ಒಂದು ಅಂಕದ ನಾಲ್ಕು ಪ್ರಶ್ನೆಗಳಿದ್ದವು ಅದನ್ನು ಈಗ ಎರಡು ಅಂಕಗಳ ಎರಡು ಪ್ರಶ್ನೆಗಳನ್ನಾಗಿ ಬದಲಾಯಿಸಿ ನೀಲನಕಾಶೆಯಲ್ಲಿ ನಾಲ್ಕು ಅಂಕಗಳ ಒಂದೇ ಪ್ರಶ್ನೆಯೆಂದು ತೋರಿಸಲಾಗುವುದು.ಪರೀಕ್ಷಾ ತಯಾರಿಗೆ ಎಲ್ಲಾ ಘಟಕಗಳ ಎಲ್ಲಾ ಅಂಶಗಳನ್ನು ಅಭ್ಯಾಸ ಮಾಡಿಕೊಳ್ಳುವ ಅಗತ್ಯವಿದೆ. ವ್ಯಾಕರಣ, ಛಂದಸ್ಸು, ಅಲಂಕಾರ ಮತ್ತು ವಾಕ್ಯರಚನೆಗೆ ಒಟ್ಟಾರೆ 23 ಅಂಕಗಳನ್ನು ಮೀಸಲಿಟ್ಟದೆ. ಪಠ್ಯ ಪುಸ್ತಕದಲ್ಲಿ ಇರುವ ವ್ಯಾಕರಣಾಂಶಗಳಲ್ಲಿ ಈ ಕೆಳಕಾಣುವ ಅಂಶಗಳನ್ನು ಆಧರಿಸಿ ವಸ್ತುನಿಷ್ಠ ಪ್ರಶ್ನೆಗಳನ್ನು ತಯಾರಿಸಲಾಗುವುದು.

| ಕ್ರ. ಸಂ. | ವ್ಯಾಕರಣಾಂಶಗಳು |
|---|---|
| 1 | ವರ್ಣಮಾಲೆ |
| 2 | ನಾಮಪದ, ನಾಮಪದದ ವಿಧಗಳು |
| 3 | ಕಾಲಗಳು – ವಿಭಕ್ತಿ ಪ್ರತ್ಯಯಗಳು |
| 4 | ಕ್ರಿಯಾಪದಗಳು |
| 5 | ಸಂಧಿಗಳು ( ಕನ್ನಡ ಮತ್ತು ಸಂಸ್ಕೃತ ) |
| 6 | ಸಮಾಸಗಳು |
| 7 | ತತ್ಸಮ– ತದ್ಭವಗಳು |
| 8 | ಗ್ರಾಂಥಿಕರೂಪಗಳು |
| 9 | ದ್ವಿರುಕ್ತಿ–ಜೋಡುನುಡಿ–ನುಡಿಗಟ್ಟು |

| 10 | ಅವ್ಯಯಗಳು |
|---|---|
| 11 | ಲೇಖನ ಚಿಹ್ನೆಗಳು |
| 12 | ಪದಗಳ ಅರ್ಥ |
| 13 | ಹೊಸಗನ್ನಡ ರೂಪ |
| 14 | ಛಂದಸ್ಸು |
| 15 | ಅಲಂಕಾರ |

## 3. ಪ್ರಶ್ನಾನುಸಾರ ಪ್ರಾಮುಖ್ಯತೆ : ಖಾಸಗಿ ಅಭ್ಯರ್ಥಿಗಳಿಗಾಗಿ

| 2018-19 | | | | | 2019-20 | | | | |
|---|---|---|---|---|---|---|---|---|---|
| ಪ್ರಶ್ನೆಗಳ ವಿಧಗಳು | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ | ಅಪೇಕ್ಷಿತ ಸಮಯ | ಪ್ರಶ್ನೆಗಳ ವಿಧಗಳು | ಪ್ರತಿಶತ | ದತ್ತ ಅಂಕಗಳು | ಪ್ರಶ್ನೆಗಳ ಸಂಖ್ಯೆ | ಅಪೇಕ್ಷಿತ ಸಮಯ |
| ವಸ್ತುನಿಷ್ಠ | 12 | 12 | 12 | 18 ನಿ. | ವಸ್ತುನಿಷ್ಠ | 05 | 05 | 05 | 05 ನಿಮಿಷಗಳು |
| ಕಿರು ಉತ್ತರಗಳು (1) | 18 | 18 | 18 | 21 ನಿ. | ಕಿರು ಉತ್ತರಗಳು (1) | 14 | 14 | 14 | 14 ನಿ. |
| ಕಿರು ಉತ್ತರಗಳು (2) | 30 | 30 | 15 | 35 ನಿ. | ಕಿರು ಉತ್ತರಗಳು (2) | 24 | 24 | 12 | 30 ನಿ. |
| ದೀರ್ಘ ಉತ್ತರಗಳು (1) | 24 | 24 | 8 | 56 ನಿ | ದೀರ್ಘ ಉತ್ತರಗಳು (1) | 36 | 36 | 12 | 55 ನಿ. |
| ದೀರ್ಘ ಉತ್ತರಗಳು (2) | 16 | 16 | 4 | 20 ನಿ. | ದೀರ್ಘ ಉತ್ತರಗಳು (2) | 16 | 16 | 04 | 36 ನಿ. |
| ದೀರ್ಘ ಉತ್ತರಗಳು (3) | - | - | - | - | ದೀರ್ಘ ಉತ್ತರಗಳು (3) | 5 | 5 | 01 | 10 ನಿ. |
| ಒಟ್ಟು | 100 | 100 | 57 | 150+15 ನಿಮಿಷ | ಒಟ್ಟು | 100 | 100 | 48 | 150+15 ನಿಮಿಷಗಳು |

ನೀಲ ನಕಾಶೆಯಲ್ಲಿ ಪ್ರಶ್ನೆಗಳ ವಿಧಗಳನ್ನು ಈ ಮೇಲಿನಂತೆ ವಸ್ತುನಿಷ್ಠ, ಅತಿಕಿರು ಉತ್ತರ 1, ಕಿರು ಉತ್ತರ 2 ಮತ್ತು ದೀರ್ಘ ಉತ್ತರ 1, 2, 3 ಎಂದು ಆರು ವಿಧಗಳಲ್ಲಿ ತೋರಿಸುವ ರೂಢಿಯಿದ್ದು, ವಸ್ತುನಿಷ್ಠ ಪ್ರಶ್ನೆಗಳು ಬಹುಆಯ್ಕೆಯ ಒಂದು ಪದದ ಉತ್ತರಗಳದ್ದಾಗಿದ್ದು, ಅ.ಕಿ.ಉ.1 : ಒಂದು ವಾಕ್ಯದ

ಉತ್ತರ, ಕಿ.ಉ.2: ಎರಡು–ಮೂರು ವಾಕ್ಯಗಳ ಉತ್ತರ, ದೀ.ಉ.1: 3 ಅಂಕಗಳ ಪ್ರಶ್ನೆಗಳು, ದೀ.ಉ.2: ನಾಲ್ಕು ಅಂಕಗಳ ಪ್ರಶ್ನೆ ಮತ್ತು ದೀ.ಉ.3: ಐದು ಅಂಕಗಳ ಪ್ರಶ್ನೆಗಳದ್ದಾಗಿವೆ. ಪ್ರಶ್ನಾ ವಿಧಗಳಲ್ಲಾದ ಬದಲಾವಣೆ ಈ ಮೇಲಿನ ಕೋಷ್ಟಕದಲ್ಲಿ ಕಾಣಸಿಗುತ್ತದೆ. ವಿದ್ಯಾರ್ಥಿಗಳಿಗೆ ಉತ್ತರ ಬರೆಯಲು 2 ಗಂಟೆ 30 ನಿಮಿಷಗಳ ಕಾಲಾವಕಾಶವಿದ್ದು, ಪ್ರಾರಂಭದಲ್ಲಿ ಪ್ರಶ್ನೆ ಪತ್ರಿಕೆ ಓದಿಕೊಳ್ಳಲು 15 ನಿಮಿಷಗಳ ಸಮಯವನ್ನು ಮೀಸಲಿಟ್ಟದೆ.

## 4. ಕಠಿಣತೆಯ ಮಟ್ಟ : ಖಾಸಗಿ ಅಭ್ಯರ್ಥಿಗಳಿಗಾಗಿ

| 2018–19 | | | | 2019–20 | | | |
|---|---|---|---|---|---|---|---|
| ಸುಲಭ | ಸಾಧಾರಣ | ಕಠಿಣ | ಒಟ್ಟು | ಸುಲಭ | ಸಾಧಾರಣ | ಕಠಿಣ | ಒಟ್ಟು |
| 30% | 50% | 20% | 100 % | 30% | 50% | 20% | 100 % |

ಕಠಿಣತೆಯ ಮಟ್ಟದಲ್ಲಿ ಯಾವುದೇ ಬದಲಾವಣೆಯಿಲ್ಲದೆ ಕಳೆದ ವರ್ಷದ ಪ್ರಮಾಣ ಯಥಾ ಸ್ಥಿತಿ ಮುಂದುವರೆದಿದೆ.

## 5. ಪ್ರಶ್ನೆಗಳ ಸ್ವರೂಪ ಮತ್ತು ಅಂಕ ವಿತರಣೆ : ಖಾಸಗಿ ಅಭ್ಯರ್ಥಿಗಳಿಗಾಗಿ

| 2018–19 | | | 2019–20 | | |
|---|---|---|---|---|---|
| ಬಹು ಆಯ್ಕೆ ಪ್ರಶ್ನೆಗಳು | 1 ಅಂಕದ 12 ಪ್ರಶ್ನೆಗಳು | 12 * 1 = 12 | ಬಹು ಆಯ್ಕೆ ಪ್ರಶ್ನೆಗಳು | 1 ಅಂಕದ 5 ಪ್ರಶ್ನೆಗಳು | 1*05=05 |
| ಒಂದು ವಾಕ್ಯದಲ್ಲಿ ಉತ್ತರಿಸುವುದು | 1 ಅಂಕದ 18 ಪ್ರಶ್ನೆಗಳು | 18 * 1 = 18 | ಒಂದು ವಾಕ್ಯದಲ್ಲಿ ಉತ್ತರಿಸುವುದು | 1 ಅಂಕದ 14 ಪ್ರಶ್ನೆಗಳು | 1*14=14 |
| 3–4 ವಾಕ್ಯಗಳಲ್ಲಿ ಉತ್ತರಿಸುವುದು | 2 ಅಂಕಗಳ 15 ಪ್ರಶ್ನೆಗಳು | 15 * 2 = 30 | 3–4 ವಾಕ್ಯಗಳಲ್ಲಿ ಉತ್ತರಿಸುವುದು | 2 ಅಂಕಗಳ 12 ಪ್ರಶ್ನೆಗಳು | 2*12=24 |
| 5–6 ವಾಕ್ಯಗಳಲ್ಲಿ ಉತ್ತರಿಸುವುದು | 3 ಅಂಕಗಳ 8 ಪ್ರಶ್ನೆಗಳು | 8 * 3 = 24 | 5–6 ವಾಕ್ಯಗಳಲ್ಲಿ ಉತ್ತರಿಸುವುದು | 3 ಅಂಕಗಳ 12 ಪ್ರಶ್ನೆಗಳು | 3*12=36 |
| 8–10 ವಾಕ್ಯಗಳಲ್ಲಿ ಉತ್ತರಿಸುವುದು | 4 ಅಂಕಗಳ 2 ಪ್ರಶ್ನೆಗಳು | 2 * 4 = 08 | 8–10 ವಾಕ್ಯಗಳಲ್ಲಿ ಉತ್ತರಿಸುವುದು | 4 ಅಂಕಗಳ 4 ಪ್ರಶ್ನೆಗಳು | 4*4=16 |
| ಪತ್ರ & ಪ್ರಬಂಧ– ವಿಸ್ತಾರವಾಗಿ ಉತ್ತರಿಸುವುದು | 4 ಅಂಕಗಳ 2 ಪ್ರಶ್ನೆಗಳು | 2 * 4 = 08 | ಪತ್ರ & ಪ್ರಬಂಧ– ವಿಸ್ತಾರವಾಗಿ ಉತ್ತರಿಸುವುದು | 5 ಅಂಕಗಳ 1 ಪ್ರಶ್ನೆಗಳು | 5*1=05 |
| ಒಟ್ಟು | 57 ಪ್ರಶ್ನೆಗಳು | 100 ಅಂಕಗಳು | ಒಟ್ಟು | 48 ಪ್ರಶ್ನೆಗಳು | 100 ಅಂಕಗಳು |